ಹೆಂಡದ, ತುಪ್ಪದ, ಮೊಸರಿನ, ಹಾಲಿನ ಮತ್ತು ಶುದ್ಧವಾದ ನೀರಿನ ಏಳು ಕಡಲುಗಳಿವೆ ಎಂದು ವಾದಿಸುವವರೂ ಬೋಧಿಸುವವರೂ ಇದ್ದಾರೆ. ಇವುಗಳನ್ನು ಮಹಾಕಾವ್ಯಗಳ ವಿಸ್ತೃತ ರೂಪ ಎಂದು ಭಾವಿಸುವವರು ಪುರಾಣ ಕರ್ತೃಗಳ ಸೃಜನಶೀಲತೆಯನ್ನು ಗಮನಿಸಿ ಕೊಂಡಾಡುತ್ತಾರೆ.

ಹೀಬ್ರೂ ಮತ್ತು ಅರೆಬಿಕ್ ಭಾಷೆಗಳಲ್ಲಿ ಇಂಥದ್ದರ ಬಗ್ಗೆ ಒಂದಷ್ಟು ಚರ್ಚೆ ನಡೆದಿವೆ. ವಿಗ್ರಹ, ಚಿತ್ರಗಳೇ ಮೊದಲಾದ ಕಲಾತ್ಮಕ ಅಭಿವ್ಯಕ್ತಿ ವಿಧಾನಗಳು ಧಾರ್ಮಿಕ ವಿಷಯಗಳನ್ನು ಹೇಗೆ ಪ್ರತಿಪಾದಿಸುತ್ತವೆ? ಧರ್ಮ, ತಾಂತ್ರಿಕತೆ, ಮತ್ತು ವೈಜ್ಞಾನಿಕ ಪ್ರಗತಿಗಳ ನಡುವಣ ಸಂಬಂಧಗಳು ಯಾವ ಬಗೆಯವು? ಎಂಬ ಕುರಿತು ಅವು ಮಾಹಿತಿ ನೀಡುತ್ತವೆ. ಧಾರ್ಮಿಕ ಭಾಷೆಯು ದೇವರನ್ನು ನಿರಾಕಾರ, ಅನಂತ ಮತ್ತು ಕಾಲಾತೀತ ಎಂದು ವರ್ಣಿಸುತ್ತದೆ. ಇದನ್ನು ಒಪ್ಪಿಕೊಂಡರೆ ದೇವರ ಬಗ್ಗೆ ಅರ್ಥಪೂರ್ಣವಾಗಿ ಮಾತನಾಡಲು ಸಾಧ್ಯವೇ ಇಲ್ಲ ಎಂದೂ ಭಾಷಾಶಾಸ್ತ್ರಜ್ಞರು ಹೇಳುತ್ತಾರೆ. ದೇವರ ಕುರಿತ ಸಾಂಪ್ರದಾಯಿಕ ಪರಿಕಲ್ಪನೆಗಳು ದೇವರನ್ನು ಸರಿಯಾಗಿ ವಿವರಿಸಲು ವಿಫಲವಾಗಿರುವುದರಿಂದ ಎಷ್ಟೋ ಬಾರಿ ಧಾರ್ಮಿಕ ಭಾಷೆಯು ಅರ್ಥಹೀನವೂ ಆಗಿಬಿಡುತ್ತದೆ.



ಈ ಕುರಿತು ಸಂಸ್ಕೃತದಲ್ಲಿ ಒಂದಷ್ಟು ಗಂಭೀರ ಚರ್ಚೆ ನಡೆದಿರುವುದು ಹೌದು. ಭಾರತೀಯ ದಾರ್ಶನಿಕರು ಭಾಷೆಗೆ ಸಾಕಷ್ಟು ಮಹತ್ವ ನೀಡಿದ್ದಾರೆ. ಈ ಕುರಿತು ಎಂ.ಎ. ಹೆಗಡೆಯವರು ಹೀಗೆ ಹೇಳುತ್ತಾರೆ- ‘ಭಾಷೆಯನ್ನು ಕುರಿತಾದ ಆಕರ್ಷಣೆ, ಆರಾಧನೆಗಳನ್ನು ವೈದಿಕ ಯುಗದಲ್ಲಿಯೇ ಕಾಣಬಹುದು. ವಾಕ್ಕು ಒಂದು ಅದ್ಭುತವೆನ್ನುವುದನ್ನು ವೈದಿಕ ಋಷಿಗಳು ಕಂಡುಕೊಂಡರು. ಅದನ್ನು ದೈವಸೃಷ್ಟಿ ಎಂದು ಕೊಂಡಾಡಿದರು. ವಾಕ್ಕಿಗೆ ದೇವತೆಯ ಸ್ಥಾನವನ್ನು ಕೊಟ್ಟು ಆರಾಧಿಸಿದರು. ಮಾತಿನ ಮೂಲವನ್ನು ಕುರಿತು ಚಿಂತಿಸಿದರು. ಅದು ಶಬ್ದವಷ್ಟೇ ಅಲ್ಲ, ನಿಶ್ಯಬ್ದದಲ್ಲಿಯೂ ಅಡಗಿದೆ ಎಂಬುದನ್ನು ಗುರುತಿಸಿದರು. ವೇದಾಂಗಗಳೆನಿಸಿದ ವ್ಯಾಕರಣ ಮತ್ತು ನಿರುಕ್ತಗಳು ಭಾಷೆಯನ್ನು ಕುರಿತು ಚಿಂತಿಸುವ ಎರಡು ಶಾಸ್ತ್ರಗಳೆಂಬುದನ್ನು ಇಲ್ಲಿ ಗಮನಿಸಬಹುದು’ (2012:7). ಪಾಣಿನಿಯು ವ್ಯಾಕರಣ ಮತ್ತು ಭಾಷೆಯ ಕುರಿತು ನಮ್ಮ ತಿಳಿವಳಿಕೆಗಳನ್ನು ಹೆಚ್ಚಿಸಿದ ಇನ್ನೊಬ್ಬ ವಿದ್ವಾಂಸ. ಆತ ಬರೇ ವ್ಯಾಕರಣ ಬರೆಯಲಿಲ್ಲ, ಬದಲು ಭಾಷೆಯನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದ. ಪತಂಜಲಿಯು ತನ್ನ ಪ್ರಖ್ಯಾತವಾದ ಮಹಾಭಾಷ್ಯದಲ್ಲಿ ಭಾಷೆಯ ಹಲವು ಮಗ್ಗುಲುಗಳನ್ನು ಪರಿಚಯಿಸಿದ. ಜೊತೆಗೆ ವಾಕ್ ಅನ್ನು ಅಗ್ನಿಯ ಹಂತಕ್ಕೂ ಏರಿಸಿದ. ಈ ಚರ್ಚೆಗಳನ್ನು ದರ್ಶನಗಳ ಹಂತಕ್ಕೇರಿಸಿದವನು ಭರ್ತೃಹರಿ. ಆತನು ತನ್ನ ವಾಕ್ಯಪದೀಯದಲ್ಲಿ ‘ಶಬ್ದವೇ ವಿಶ್ವವನ್ನು ಆಗುಮಾಡುವ ಚೈತನ್ಯ’ ಎಂದು ಹೇಳಿ ಅದನ್ನೇ ಬ್ರಹ್ಮ ಎಂದು ಕರೆಯುತ್ತಾನೆ. ಕುಮಾರಿಲನು ಪ್ರತ್ಯಕ್ಷ, ಅನುಮಾನ ಮತ್ತು ಅರ್ಥಗ್ರಹಿಕೆ ಎಂಬ ಮೂರು ಹಂತಗಳಲ್ಲಿ ಭಾಷೆಯನ್ನು ಗ್ರಹಿಸಬಹುದು ಎನ್ನುತ್ತಾನೆ. ಕನ್ನಡದ ಕೇಶೀರಾಜನು ತನ್ನ ‘ಶಬ್ದಮಣಿ ದರ್ಪಣ’ ದ ಪೀಠಿಕಾ ಪ್ರಕರಣದಲ್ಲಿ ಈ ರೀತಿಯಾಗಿ ಹೇಳುತ್ತಾನೆ-

**ವ್ಯಾಕರಣದಿಂದೆ ಪದಮಾ**
**ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ**
**ಲೋಕಂ ತತ್ವಾಲೋಕದಿ**
**ನಾಕಾಂಕ್ಷಿಪ ಮುಕ್ತಿಯಕ್ಕುಮಿದೆ ಬುಧರ್ಗೆ ಫಲಂ**
**(ಪೀಠಿಕೆ:10)**

(ವ್ಯಾಕರಣದಿಂದ ಪದ ಸಿದ್ಧಿ, ಪದಸಿದ್ಧಿಯಿಂದ ಅರ್ಥಜ್ಞಾನ, ಅರ್ಥಜ್ಞಾನದಿಂದ ತತ್ವವಿಚಾರ, ತತ್ವಜ್ಞಾನದಿಂದ ಮುಕ್ತಿ, ಇದುವೇ ವಿದ್ವಾಂಸರಿಗೆ ಫಲ).

ವೇದಾಗಮಗಳೆಲ್ಲ ಭಾಷಿಕ ರಚನೆಗಳಾದ್ದರಿಂದ ಅವುಗಳ ವಿಶ್ಲೇಷಣೆಗಳಿಗೆ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿತ್ತು. ಇವುಗಳ ಮುಖ್ಯ ಸಮಸ್ಯೆ ಏನೆಂದರೆ, ಭಾಷಿಕ ಚರ್ಚೆಗಳನ್ನು ಧಾರ್ಮಿಕಗೊಳಿಸಿದ್ದು. ಮುಖ್ಯ ಕೊಡುಗೆ ಏನೆಂದರೆ, ಭಾಷೆಯ ಮೂಲಕ ಮೂರ್ತದಿಂದ ಅಮೂರ್ತದ ಕಡೆಗೆ ಚಲಿಸಲು ಸಾಧ್ಯ ಎಂಬುದನ್ನು ತೋರಿಸಿದ್ದು.